ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಯಲಹಂಕ ವಲಯ, ಬೆಂಗಳೂರು-92

ಸಂಖ್ಯೆ :ಸ.ಕಾ.ಅ./ಕೊ.ಉ.ವಿ/ಪಿಆರ್/132/19-20

ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ,
ಕೊಡಿಗೇಹಳ್ಳಿ ಉಪವಿಭಾಗ,
9ನೇ ಮುಖ್ಯರಸ್ತೆ, ಸಹಕಾರನಗರ, ಬೆಂಗಳೂರು-92,
ದಿನಾಂಕ: 10.07.2019

ರವರಿಗೆ,

ಕಾರ್ಯಪಾಲಕ ಅಭಿಯಂತರರು
ಬೃಹತ್ ನೀರುಗಾಲುವೆ ವಿಭಾಗ
ಯಲಹಂಕ ವಲಯ, ಬಿ.ಬಿ.ಎಂ.ಪಿ
ಜಯನಗರ ವಾಣಿಜ್ಯ ಸಂಕೀರ್ಣ
ಬೆಂಗಳೂರು

ಮಾನ್ಯರೇ,

ವಿಷಯ:- ಬಿಬಿಎಂಪಿ ಯ ಯಲಹಂಕ ವಲಯದ ವಾರ್ಡ್ ಸಂಖ್ಯೆ 08ರ ವ್ಯಾಪ್ತಿಯಲ್ಲಿ ಕೊಡೀಗೆಹಳ್ಳಿಯ ಎ.ಕೆ ಕಾಲೋನಿ ಮತ್ತು ಹನುಮಯ್ಯ ಬಡಾವಣೆ ಹಿಂಭಾಗದಲ್ಲಿರುವ ಮಳೆನೀರು ಕಾಲುವೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ

ಮೇಲ್ಕಂಡ ವಿಷಯಕ್ಕೆ ಸಂಭಂದಿಸಿದಂತೆ, ಈ ಮೂಲಕ ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ ವಾರ್ಡ್ ಸಂಖ್ಯೆ 08ರ ವ್ಯಾಪ್ತಿಯಲ್ಲಿ ಕೊಡೀಗೆಹಳ್ಳಿಯ ಎ.ಕೆ ಕಾಲೋನಿ ಮತ್ತು ಹನುಮಯ್ಯ ಬಡಾವಣೆ ಹಿಂಭಾಗದಲ್ಲಿ ಮಳೆನೀರು ಕಾಲುವೆಯು ಹಾದುಹೋಗಿದ್ದು ಈ ಕಾಲುವೆಗೆ ಹೊಂದಿಕೊಂಡಂತೆ ಪರಿಶಿಷ್ಟ ಜಾತಿ ಜನಾಂಗದವರ ರುದ್ರ ಭೂಮಿ ಇದ್ದು, ಈ ರುದ್ರ ಭೂಮಿಗೆ ಸಾರ್ವಜನಿಕರು ಹೋಗಬೇಕಾದಲ್ಲಿ ಈ ಕಾಲುವೆಯನ್ನು ದಾಟಿಕೊಂಡು ಹೋಗಬೇಕಾಗಿದ್ದು ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ಸದರಿ ರುದ್ರಭೂಮಿಗೆ ಹೋಗಲು ಇದಕ್ಕೆ ಹೊಂದಿಕೊಂಡಂತಿರುವ ಮಳೆನೀರು ಕಾಲುವೆಯನ್ನು ಅಭಿವೃದ್ಧಿ ಪಡಿಸಿ ಸಾರ್ವಜನಿಕರು ಸಂಚಾರ ಮಾಡುವಂತೆ ಅನುಕೂಲ ಮಾಡಿಕೊಡುವಂತೆ ಸಾರ್ವಜನಿಕರು ಸ್ಥಳೀಯ ಬಿಬಿಎಂಪಿ ಸದಸ್ಯರಿಗೆ ಮತ್ತು ಶಾಸಕರಿಗೆ ಮನವಿ ಮಾಡಿರುತ್ತಾರೆ. ಸಾರ್ವಜನಿಕರ ಮನವಿಯ ಮೇರೆಗೆ ಸದರಿ ಕೆಲಸವನ್ನು ಅತ್ಯವಶ್ಯಕವಾಗಿ ತುರ್ತಾಗಿ ಮಾಡಬೇಕಾಗಿದ್ದುದರಿಂದ ಸ್ಥಳೀಯ ಬಿಬಿಎಂಪಿ ಸದಸ್ಯರು ಈ ಕಾಮಗಾರಿಯನ್ನು ವಾರ್ಡ್ ಮಟ್ಟದ ಅನುದಾನದಲ್ಲಿ ತೆಗೆದು ಕೊಳ್ಳುವಂತೆ ಸೂಚಿಸಿದ್ದು ಈ ಕಾಮಗಾರಿಗೆ ಬಿಬಿಎಂಪಿ ವತಿಯಿಂದ ರೂ: 30.00 ಲಕ್ಷಗಳಷ್ಟು ಅನುದಾನವು ಮಂಜೂರಾಗಿರುತ್ತದೆ.

ಆದ್ದರಿಂದ ಸದರಿ ಅನುದಾನದಲ್ಲಿ ಕೊಡೀಗೆಹಳ್ಳಿಯ ಎ.ಕೆ ಕಾಲೋನಿ ಮತ್ತು ಹನುಮಯ್ಯ ಬಡಾವಣೆ ಯಿಂದ ಮಳೆ ನೀರು ಕಾಲುವೆಗೆ ಸಂಪರ್ಕಿಸುವ ರಸ್ತೆಯಿಂದ ರುದ್ರಭೂಮಿವರೆಗೆ ಹಾಲಿ ಇರುವ ಕಾಲುವೆಯ ಪಥದಂತೆ, ಮಳೆನೀರು ಸರಾಗವಾಗಿ ಹರಿಯಲು ಅವಕಾಶವಾಗುವಂತೆ ಹಾಗೂ ಈ ಕಾಲುವೆಯ ಮೇಲೆ ಸಾರ್ವಜನಿಕರು ಸಂಚಾರ ಮಾಡಲು ಅನುಕೂಲವಾಗುವಂತೆ ಉದ್ದೇಶಿಸಿ ಸುಮಾರು 31.00ಮೀ ಉದ್ದದಷ್ಟು ಚರಂಡಿಗೆ ಆರ್‌ಸಿಸಿ ಗೋಡೆಗಳನ್ನು ನಿರ್ಮಿಸಿ ಅದರ ಮೇಲೆ ಆರ್‌ಸಿಸಿ ಡೆಕ್‌ಸ್ಲಾಬ್ ಹಾಕಲು ಅಂದಾಜು ಪಟ್ಟಿಯಲ್ಲಿ ಪರಿಗಣಿಸಲಾಗಿದ್ದು ಸದರಿ ಕಾಮಗಾರಿಯನ್ನು ಈ ಉಪ ವಿಭಾಗದ ವ್ಯಾಪ್ತಿಯಿಂದ ಮಾಡಲಾಗುತ್ತದೆ ಎಂಬ ವಿಷಯವನ್ನು ತಮ್ಮ ಅವಗಾಹನೆಗೆ ತರಬಹಸುತ್ತೇನೆ.

0|C

11/7/19

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೊಡಿಗೇಹಳ್ಳಿ ಉಪವಿಭಾಗ,
ಬಿಬಿಎಂಪಿ, ಬೆಂಗಳೂರು.

ಪ್ರತಿಯನ್ನು:
1. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ನೀರುಗಾಲುವೆ ಉಪವಿಭಾಗ, ಬ್ಯಾಟರಾಯನಪುರ ಬಿ.ಬಿ.ಎಂ.ಪಿ ಜಯನಗರ ವಾಣಿಜ್ಯ ಸಂಕೀರ್ಣ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.